# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ/1550/2015/ಡಿಆರ್‌ಇ-1

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀದಿ,
ಬೆಂಗಳೂರು.
ದಿನಾಂಕ: 06/05/2022

## ಕರ್ನಾಟಕ ಲೋಕಾಯುಕ್ತ ಕಾಯಿದೆ, 1984 ರ ಕಲಂ 12(3) ರನ್ವಯ ವರದಿ

ವಿಷಯ: (1) ಶ್ರೀ.ಬಿ.ದಿಲೀಪ್ ಸಾಬ್ (ದಿಲೀಪ್‌ಕುಮಾರ್), ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಹಿರೇಕುಂಬಳಗುಂಟೆ ಗ್ರಾಮ ಪಂಚಾಯಿತಿ, (2) ಶ್ರೀ.ಹೆಚ್.ಬೋರಯ್ಯ, ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಹಿರೇಕುಂಬಳಗುಂಟೆ ಗ್ರಾಮ ಪಂಚಾಯಿತಿ, (3) ಶ್ರೀ.ಹೆಚ್.ಸಿ.ನಾರಾಯಣಪ್ಪ, ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಹಿರೇಕುಂಬಳಗುಂಟೆ ಗ್ರಾಮ ಪಂಚಾಯಿತಿ (4) ಶ್ರೀ.ಬಿ.ಅಶೋಕ್, ಹಿಂದಿನ ಕಿರಿಯ ಇಂಜಿನಿಯರ್, ಹಿರೇಕುಂಬಳಗುಂಟೆ ಗ್ರಾಮ ಪಂಚಾಯಿತಿ, ಕೂಡ್ಲಿಗಿ ತಾಲ್ಲೂಕು, (5) ಶ್ರೀ.ಎಂ.ಬಸವನಗೌಡ, ಹಿಂದಿನ ಕಿರಿಯ ಇಂಜಿನಿಯರ್ (ನಿವೃತ್ತ), ಹಿರೇಕುಂಬಳಗುಂಟೆ ಗ್ರಾಮ ಪಂಚಾಯಿತಿ, ಕೂಡ್ಲಿಗಿ ತಾಲ್ಲೂಕು, ಮತ್ತು (6) ಶ್ರೀ.ಎನ್.ಸಿ.ಪ್ರಸನ್ನಕುಮಾರ್, ಹಿಂದಿನ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಹಿರೇಕುಂಬಳಗುಂಟೆ ಗ್ರಾಮ ಪಂಚಾಯಿತಿ, ಕೂಡ್ಲಿಗಿ ತಾಲ್ಲೂಕು, ಬಳ್ಳಾರಿ ಜಿಲ್ಲೆ, ಇವರ ವಿರುದ್ಧದ ನಡವಳಿ ಕುರಿತು.

******

1. ಶ್ರೀ.ಜಿ.ಎಂ.ಪ್ರಕಾಶ್ ಬಿನ್ ಜಿ.ಮರುಳುಸಿದ್ದಪ್ಪ, ಟಿ.ಸೂರವ್ವನಹಳ್ಳಿ ಗ್ರಾಮ ಬಯಲು ತುಂಬರಗುದ್ದಿ, ಕೂಡ್ಲಿಗಿ ತಾಲ್ಲೂಕು, ಬಳ್ಳಾರಿ ಜಿಲ್ಲೆ, (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು (1) ಶ್ರೀ.ಬಿ.ದಿಲೀಪ್‌ಸಾಬ್ (ದಿಲೀಪ್ ಕುಮಾರ್), ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಹಿರೇಕುಂಬಳಗುಂಟೆ ಗ್ರಾಮ ಪಂಚಾಯಿತಿ, (2) ಶ್ರೀ.ಹೆಚ್.ಬೋರಯ್ಯ, ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಹಿರೇಕುಂಬಳಗುಂಟೆ ಗ್ರಾಮ ಪಂಚಾಯಿತಿ, (3) ಶ್ರೀ.ಹೆಚ್.ಸಿ.ನಾರಾಯಣಪ್ಪ, ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಹಿರೇಕುಂಬಳಗುಂಟೆ ಗ್ರಾಮ ಪಂಚಾಯಿತಿ (4) ಶ್ರೀ.ಬಿ.ಅಶೋಕ್, ಹಿಂದಿನ ಕಿರಿಯ ಇಂಜಿನಿಯರ್, ಹಿರೇಕುಂಬಳಗುಂಟೆ ಗ್ರಾಮ ಪಂಚಾಯಿತಿ, ಕೂಡ್ಲಿಗಿ ತಾಲ್ಲೂಕು, (5) ಶ್ರೀ.ಎಂ.ಬಸವನಗೌಡ, ಹಿಂದಿನ ಕಿರಿಯ ಇಂಜಿನಿಯರ್ (ನಿವೃತ್ತ), ಹಿರೇಕುಂಬಳಗುಂಟೆ ಗ್ರಾಮ ಪಂಚಾಯಿತಿ, ಕೂಡ್ಲಿಗಿ ತಾಲ್ಲೂಕು, ಮತ್ತು (6) ಶ್ರೀ.ಎನ್.ಸಿ.ಪ್ರಸನ್ನಕುಮಾರ್, ಹಿಂದಿನ ಗ್ರಾಮ ಪಂಚಾಯಿತಿ ಅಧ್ಯಕ್ಷರು, ಹಿರೇಕುಂಬಳಗುಂಟೆ ಗ್ರಾಮ ಪಂಚಾಯಿತಿ, ಕೂಡ್ಲಿಗಿ ತಾಲ್ಲೂಕು, ಬಳ್ಳಾರಿ ಜಿಲ್ಲೆ, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರು

ಸಲ್ಲಿಸಿದ ಮೇರೆಗೆ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ರ ಕಲಂ 9 ರಡಿಯಲ್ಲಿ ದತ್ತವಾದ ಅಧಿಕಾರ ಚಲಾಯಿಸಿ, ವಿಚಾರಣೆಗೆ ತೆಗೆದುಕೊಂಡು ತನಿಖೆ ಮಾಡಿದೆ.

2. ದೂರುದಾರರು ತಮ್ಮ ದೂರಿನಲ್ಲಿ ಬಳ್ಳಾರಿ ಜಿಲ್ಲೆ, ಕೂಡ್ಲಿಗಿ ತಾಲ್ಲೂಕು, ಹಿರೇಕುಂಬಳಗುಂಟೆ ಗ್ರಾಮಪಂಚಾಯಿತಿಯಲ್ಲಿ 13ನೇ ಹಣಕಾಸು ಯೋಜನೆಯಲ್ಲಿ 2013-14 ಮತ್ತು 2014-15 ಮತ್ತು ನಿಧಿ-1 ರಲ್ಲಿ ಅವ್ಯವಹಾರ ಮತ್ತು ಭ್ರಷ್ಟಾಚಾರ ನಡೆದಿರುತ್ತದೆ. ಮೇಲಾಧಿಕಾರಿಗಳಿಂದ ಮಂಜೂರಾತಿ ಪಡೆಯದೆ ಹಣವನ್ನು ವ್ಯಯ ಮಾಡಲಾಗಿದೆ, ಕರ್ನಾಟಕ ಪಂಚಾಯತ್ ರಾಜ್ ನಿಯಮ 1983 ರ ನಮೂನೆ 28 ರಂತೆ ಯಾವುದೇ ದಾಖಲಾತಿಗಳನ್ನು ನಿರ್ವಹಿಸಿರುವುದಿಲ್ಲ. ಉದ್ದೇಶಪೂರ್ವಕವಾಗಿ ಭೋಗಸ್ ಬಿಲ್‌ಗಳನ್ನು ತಯಾರಿಸಿ ಹಣ ಲೂಟಿ ಮಾಡಿರುವುದು ಕಂಡುಬರುತ್ತದೆ. ಬಿಲ್ಲುಗಳ ಬಗ್ಗೆ ಹಾಗೂ ಯಾವುದೇ ಕೊಟೇಷನ್‌ಗಳನ್ನು ಕರೆಯುವ ಬಗ್ಗೆ ಸಾಮಾನ್ಯ ಸಭೆಯ ನಡವಳಿಗಳಲ್ಲಿ ಮಾಹಿತಿ ಇರುವುದಿಲ್ಲ. ಕೆಲವು ಬಿಲ್ ಹಾಗೂ ಕೊಟೇಷನ್‌ಗಳನ್ನು ಪರಿಶೀಲಿಸಿದರೆ ಕೈಬರಹ ಬರವಣಿಗೆಯಿರುತ್ತದೆ. ಬೋಗಸ್ ಬಿಲ್‌ಗಳನ್ನು ತಯಾರಿಸಿ ಹಣ ಪಡೆದುಕೊಳ್ಳಲಾಗಿದೆ. ಈ ರೀತಿಯಲ್ಲಿ ಸರ್ಕಾರದ ಹಣವನ್ನು ದುರುಪಯೋಗ ಮಾಡಿಕೊಂಡಿರುತ್ತಾರೆಂದು ಆಪಾದಿಸಿ ದೂರನ್ನು ಸಲ್ಲಿಸಿರುತ್ತಾರೆ.

3. ದೂರುದಾರರ ದೂರಿನ ಮೇಲೆ ಆಕ್ಷೇಪಣೆಯನ್ನು ಸಲ್ಲಿಸುವಂತೆ ಎದುರುದಾರರಿಗೆ ಆದೇಶಿಸಲಾಗಿತ್ತು. 1ನೇ ಎದುರುದಾರರು ಆಕ್ಷೇಪಣೆಯನ್ನು ಸಲ್ಲಿಸಿದ್ದು, ಆಕ್ಷೇಪಣೆಯಲ್ಲಿ ಈ ಕೆಳಗಿನಂತೆ ವಿವರಣೆಯನ್ನು ನೀಡಿರುತ್ತಾರೆ.

i. 2013-14ನೇ ಸಾಲಿನಲ್ಲಿ 13ನೇ ಹಣಕಾಸು ಯೋಜನೆಯಲ್ಲಿ ರೂ.18,70,403/- ಗಳ ಅನುದಾನ ಬಿಡುಗಡೆಯಾಗಿದ್ದು, 2014-15ನೇ ಸಾಲಿನ 13ನೇ ಹಣಕಾಸು ಯೋಜನೆಯಡಿ ಕ್ರಿಯಾ ಯೋಜನೆ ಮಾತ್ರ ತಯಾರಿಸಿದ್ದು, ಹಣ ಬಿಡುಗಡೆಯಾಗಿರುವುದಿಲ್ಲ.

ii. 2013-14ನೇ ಸಾಲಿನಲ್ಲಿ 13ನೇ ಹಣಕಾಸು ಯೋಜನೆಯಲ್ಲಿ ಬೀದಿ ದೀಪಗಳಿಗೆ ರೂ.2,30,689/- ಗಳನ್ನು ಕಾಯ್ದಿರಿಸಲಾಗಿದ್ದು, 2014-15ನೇ ಸಾಲಿನಲ್ಲಿ ರೂ.2,23,956/- ಗಳನ್ನು ಖರ್ಚು ಮಾಡಲಾಗಿದೆ.

iii. 13ನೇ ಹಣಕಾಸು ಯೋಜನೆಯಡಿ ಕುಡಿಯುವ ನೀರಿನ ಸಾಮಗ್ರಿ ಖರೀದಿ ಮತ್ತು ಪಂಪುಗಳ ಪರಿಕರಗಳ ಖರೀದಿಗಾಗಿ ರೂ.13,05,174/- ಗಳನ್ನು ಕಾಯ್ದಿರಿಸಲಾಗಿದೆ ಹಾಗೂ ರೂ.12,17,037/- ಖರ್ಚು ಮಾಡಲಾಗಿದೆ.

iv. ಗ್ರಾಮಪಂಚಾಯಿತಿ ನಿಧಿ-1 ರಲ್ಲಿ ಬೀದಿ ದೀಪಗಳಿಗೆ ಹಾಗೂ ನೀರು ನಿರ್ವಹಣೆಗೆ ಯಾವುದೇ ಹಣ ಭರಿಸಿರುವುದಿಲ್ಲ.

v. ಹುಲಿಕೆರೆಯ ಶ್ರೀಮತಿ.ಜಯಶ್ರೀ ಬಿನ್ ಶರಣಪ್ಪ ಇವರಿಗೆ ಇಂದಿರಾ ಆವಾಜ್ ಯೋಜನೆಯಡಿ ಮಂಜೂರು ಆಗಿರುವ ಮನೆಯನ್ನು ಕೂಡ್ಲೂರು ಗಂಗಾಧರಯ್ಯರವರು ಛಾಪಾ ಕಾಗದದಲ್ಲಿ ಬರೆದುಕೊಟ್ಟಿದ್ದರಿಂದ ಫಲಾನುಭವಿಗೆ ನಿವೇಶನ ಇಲ್ಲದೇ ಇದ್ದುದರಿಂದ ನಿರ್ಮಿಸಲಾಗಿದೆ.

vi. ಹಿರೇಕುಂಬಳಗುಂಟೆ ಗ್ರಾಮದ ಶ್ರೀಮತಿ.ಬಸಮ್ಮ ಕೋಂ ಸೋಮಶೇಖರಪ್ಪ ರವರಿಗೆ ತಳಪಾಯ ಹಂತಕ್ಕೆ ರೂ.14,500/- ಬಿಡುಗಡೆಯಾಗಿದ್ದು, ಲಿಂಟಲ್ ಹಂತ ನಿರ್ಮಿಸಿರುವುದಿಲ್ಲ. ಆದರೆ ಜಿ.ಪಿ.ಎಸ್.ಮಾಡುವಾಗ, ಜಯಮ್ಮ ಹೆಸರಿನ ಇನ್ನೊಬ್ಬ ಫಲಾನುಭವಿಯ ಮನೆಯ ಜಿ.ಪಿ.ಎಸ್.ನ್ನು ಪಂಚಾಯಿತಿ ಸಿಬ್ಬಂದಿ ಮಂಜುನಾಥ ಇವರ ತಪ್ಪಿನಿಂದಾಗಿ ಈ ಫಲಾನುಭವಿಗೆ ನಿಗಮದವರು ರೂ.20,000/- ಬಿಡುಗಡೆ ಮಾಡಿರುತ್ತಾರೆ. ಆದ್ದರಿಂದ, ಬಸಮ್ಮ ಇವರಿಗೆ ನೋಟೀಸ್ ನೀಡಲಾಗಿದೆ ಹಾಗೂ ಆದಷ್ಟು ಬೇಗ ಮನೆಯನ್ನು ಪೂರ್ಣಗೊಳಿಸಲು ತಿಳಿಸಲಾಗಿದೆ. ಮೊದಲನೆ ಹಂತ ರೂ.14,500/-, 2ನೇ ಹಂತ ರೂ.20,000/-, 3ನೇ ಹಂತ ರೂ.20,000/-, 4ನೇ ಹಂತ ರೂ.20,000/- ಹಣವನ್ನು ನಿಗಮದವರು ಬಿಡುಗಡೆ ಮಾಡಿರುತ್ತಾರೆ.

vii. 2013-14ನೇ ಸಾಲಿನ ಸ್ಥಳೀಯ ಲೆಕ್ಕ ಪರಿಶೋಧನೆ ಮುಗಿದಿದ್ದು, 2014-15ನೇ ಸಾಲಿನ ಸ್ಥಳೀಯಲೆಕ್ಕ ಪರಿಶೋಧನೆ ಇನ್ನೂ ಪ್ರಾರಂಭವಾಗಿರುವುದಿಲ್ಲ.

viii. ಇಂದಿರಾ ಆವಾಸ್/ಬಸವ ವಸತಿ ಯೋಜನೆಯಡಿ ಉಪನೋಂದಣಿ ಕಚೇರಿಯ ನೋಂದಣಿ ಫೀ.175/-ಗಳನ್ನು ವಸೂಲಿ ಮಾಡಲಾಗಿರುತ್ತದೆಯೆಂದು ಹೇಳಿರುತ್ತಾರೆ.

4. 1ನೇ ಎದುರುದಾರರ ಆಕ್ಷೇಪಣೆಯನ್ನು ಪರಿಶೀಲಿಸಿದಾಗ, ದೂರುದಾರರು ಮಾಡಿರುವ ಆಪಾದನೆಯನ್ನು ಅಲ್ಲಗಳೆದಿರುವುದು ಕಂಡುಬರುತ್ತದೆ. ದೂರುದಾರರ ದೂರನ್ನು ಪರಿಶೀಲಿಸಿದಾಗ, ಮೇಲಾಧಿಕಾರಿಗಳಿಂದ ಮಂಜೂರಾತಿ ಪಡೆಯದೆ ಹಣ ವ್ಯಯ ಮಾಡಿರುತ್ತಾರೆ. ಪಂಚಾಯಿತಿ ಸಭೆಯಲ್ಲಿ ಮಂಜೂರಾತಿಯನ್ನ ಪಡೆದುಕೊಂಡಿಲ್ಲ, ಪಂಚಾಯತ್ ರಾಜ್ ಅಧಿನಿಯಮ ಉಲ್ಲಂಘನೆ ಮಾಡಿರುತ್ತಾರೆ. ನಕಲಿ ಬಿಲ್ಲಿಗಳನ್ನು ಸೃಷ್ಟಿಸಿರುತ್ತಾರೆ. ಅಧಿಕಾರ ವ್ಯಾಪ್ತಿ ಮೀರಿ ಹಣವನ್ನು ಸಂಗ್ರಹ ಮಾಡಿರುತ್ತಾರೆ. ಅನುಮೋದಿಸಿದ ಕ್ರಿಯಾ ಯೋಜನೆಯನ್ನು ತಿದ್ದುಪಡಿ ಮಾಡಿರುತ್ತಾರೆ. ದಾಖಲಾತಿಗಳನ್ನು ನಿರ್ವಹಿಸಿಲ್ಲವೆಂಬ ಆಪಾದನೆಯಿರುವ ಕಾರಣ ಈ ಪ್ರಕರಣದಲ್ಲಿ ದಾಖಲಾತಿಗಳ ಪರಿಶೀಲನೆ ಮತ್ತು ಕಾಮಗಾರಿಗಳ ಬಗ್ಗೆ ಸ್ಥಳದ ಪರಿಶೀಲನೆ ಕೂಡ ಅಗತ್ಯವೆಂದು ಕಂಡುಬಂದ ಕಾರಣ ದೂರುದಾರರ ದೂರಿನ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಪೋಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬಳ್ಳಾರಿ ಇವರಿಗೆ ಆದೇಶಿಸಲಾಯಿತು.

5. ಸದರಿಯವರು ದಿ.26/3/2019 ರಂದು ವಿವರವಾದ ವರದಿ ಮತ್ತು ದಾಖಲಾತಿಗಳನ್ನು ಸಲ್ಲಿಸಿ ಈ ಕೆಳಕಂಡಂತೆ ಅಭಿಪ್ರಾಯ ನೀಡಿರುತ್ತಾರೆ.

1. 2013-14ನೇ ಸಾಲಿನಲ್ಲಿ ಪಿಡಿಓ ಹೆಚ್.ಬೋರಯ್ಯ (2ನೇ ಎದುರುದಾರರು) ಮತ್ತು ಅಧ್ಯಕ್ಷರಾದ ಎಂ.ಸಿ.ಪ್ರಸನ್ನಕುಮಾರ (6ನೇ ಎದುರುದಾರರು) ಅವಧಿಯಲ್ಲಿ ಗ್ರಾಮ ಪಂಚಾಯಿತಿಯ 13ನೇ ಹಣಕಾಸು ಯೋಜನೆ ಮತ್ತು ನಿಧಿ-1 (ಕರ ವಸೂಲಾತಿ) ರಿಂದ ಒಟ್ಟು ರೂ.27,30,175/- ಗಳನ್ನು ವೆಚ್ಚ ಮಾಡಿದ್ದು, ಇದರಲ್ಲಿ ರೂ.1,30,844/- ಮೊತ್ತದ ಸಿಎಫ್‌ಎಲ್ ಬಲ್ಬ್ ಖರೀದಿ ಮಾಡಿದ್ದು, ಕರ್ನಾಟಕ ಪಾರದರ್ಶಕ ನಿಯಮಾನುಸಾರ ರೂ.1 ಲಕ್ಷಕ್ಕಿಂತ ಮೇಲ್ಪಟ್ಟಿದ್ದಲ್ಲಿ, ಟೆಂಡರ್ ಕರೆದು ಸಾಮಾಗ್ರಿಗಳನ್ನು ಖರೀದಿಸಬೇಕಿದ್ದು, ಸದರಿಯವರು ರೂ.1,30,844/- ಮೊತ್ತದಲ್ಲಿ ಸಿಎಫ್‌ಎಲ್ ಬಲ್ಬ್ ಖರೀದಿಯನ್ನು ಕೊಟೇಷನ್ ಮೂಲಕ ಖರ್ಚು ಮಾಡಿ ಹಣ ದುರ್ಬಳಕೆ ಮಾಡಿಕೊಂಡಿರುತ್ತಾರೆ. ಉಳಿದ

ವೆಚ್ಚಗಳಲ್ಲಿ ಗ್ರಾಮ ಪಂಚಾಯಿತಿಯಲ್ಲಿ ಯಾವುದೇ ಬಿಲ್ಲುಗಳು/ಓಚರ್‌ಗಳು, ದಾಸ್ತಾನು ವಹಿ, ನಿಧಿ-1 ರ ನಗದು ಪುಸ್ತಕ, ಅಳತೆ ಪುಸ್ತಕ, ಕಾಮಗಾರಿಗಳನ್ನು ಮಾಡಿದ ಬಗ್ಗೆ ದಾಖಲಾತಿಗಳು, ಸಂದಾಯವಾದ ಪಾವತಿಗಳಿಗೆ ಯಾವುದೇ ದಾಖಲೆ/ಚೆಕ್ ಲೀಫ್ ಜೆರಾಕ್ಸ್ ಪ್ರತಿ ಹಾಗೂ ಇತರೆ ದಾಖಲಾತಿಗಳು ಇಲ್ಲದೇ ಇರುವುದರಿಂದ ಇಂತಿಷ್ಟು ಮೊತ್ತದ ದುರ್ಬಳಕೆ ಆಗಿದೆ ಎಂದು ಖಚಿತವಾಗಿ ಹೇಳಲಾಗುವುದಿಲ್ಲ. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ ಮತ್ತು ಕರ್ನಾಟಕ ಪಾರದರ್ಶಕ ಅಧಿನಿಯಮ ಸ್ಪಷ್ಟವಾಗಿ ಉಲ್ಲಂಘಿಸಿದ್ದು ದೃಢಪಟ್ಟಿರುತ್ತದೆ.

2. 2014-15ನೇ ಸಾಲಿನಲ್ಲಿ ಅಧ್ಯಕ್ಷರು ಎಂ.ಸಿ.ಪ್ರಸನ್ನಕುಮಾರ, (R.6) ಪಿಡಿಓ ದಿಲೀಪ್‌ಸಾಬ್ (R.1) ರವರ ಅವಧಿಯಲ್ಲಿ ಒಂದೇ ಆರ್ಥಿಕ ವರ್ಷದಲ್ಲಿ ಒಟ್ಟು 680 ಸಿ.ಎಫ್.ಎಲ್. ಬಲ್ಬ್‌ಗಳನ್ನು ಖರೀದಿ ಮಾಡಿರುತ್ತಾರೆ. ಒಟ್ಟು ರೂ.2,87,811/- ಖರ್ಚು ಮಾಡಿರುತ್ತಾರೆ. ಕರ್ನಾಟಕ ಪಾರದರ್ಶಕ ನಿಯಮಾನುಸಾರ ರೂ.1 ಲಕ್ಷಕ್ಕಿಂತ ಮೇಲ್ಪಟ್ಟಿದ್ದಲ್ಲಿ, ಟೆಂಡರ್ ಕರೆದು ಸಾಮಾಗ್ರಿಗಳನ್ನು ಖರೀದಿಸಬೇಕಿದ್ದು, ಸದರಿಯವರು ರೂ.1,87,811/- ಗಳನ್ನು ಕೊಟೇಷನ್ ಮೂಲಕ ಖರ್ಚು ಮಾಡಿದ್ದು, ನಿಯಮಬಾಹಿರ ಆಗಿರುತ್ತದೆ.

3. 2014-15ನೇ ಸಾಲಿನಲ್ಲಿ ಅಧ್ಯಕ್ಷರಾದ ಎಂ.ಸಿ.ಪ್ರಸನ್ನಕುಮಾರ (R.6) ಮತ್ತು ಪಿಡಿಓ ದಿಲೀಪಸಾಬ್ (R.1) ರವರ ಅವಧಿಯಲ್ಲಿ ಮೋಟರ್ ದುರಸ್ತಿ, ಕುಡಿಯುವ ನೀರಿನ ಮತ್ತು ಇತರೆ ಸಾಮಾಗ್ರಿಗಳು, ಶಾಲೆಗಳಿಗೆ ಪೂರೈಕೆ ಮಾಡಿದ ಪೀಠೋಪಕರಣಗಳ ಖರೀದಿಯಲ್ಲಿ ಮತ್ತು ನಿಧಿ-1 ರಲ್ಲಿ ಒಟ್ಟು ರೂ.9,52,075/- ಮೊತ್ತದ ದುರ್ಬಳಕೆ ಮಾಡಿಕೊಂಡಿರುವುದು ಸಾಕ್ಷಿದಾರರ ಹೇಳಿಕೆಗಳಿಂದ ಮತ್ತು ದಾಖಲಾತಿಗಳಿಂದ ದೃಢಪಟ್ಟಿರುತ್ತದೆ.

4. 2014-15ನೇ ಸಾಲಿನಲ್ಲಿ ಅಧ್ಯಕ್ಷರಾದ ಎಂ.ಸಿ.ಪ್ರಸನ್ನಕುಮಾರ (R.6) ಮತ್ತು ಪಿಡಿಓ ನಾರಾಯಣಪ್ಪ (R.3) ರವರ ಅವಧಿಯಲ್ಲಿ ಮೋಟಾರ್ ದುರಸ್ತಿ, ಕುಡಿಯುವ ನೀರಿನ ಮತ್ತು ಇತರೆ ಸಾಮಾಗ್ರಿಗಳ ಖರೀದಿಯಲ್ಲಿ ಮತ್ತು ನಿಧಿ-1 ರಲ್ಲಿ ಒಟ್ಟು ರೂ.2,20,693/- ಮೊತ್ತದ ದುರ್ಬಳಕೆ ಮಾಡಿಕೊಂಡಿರುವುದು ಸಾಕ್ಷಿದಾರರ ಹೇಳಿಕೆಗಳಿಂದ ಮತ್ತು ದಾಖಲಾತಿಗಳಿಂದ ದೃಢಪಟ್ಟಿರುತ್ತದೆ.

5. 2014-15ನೇ ಸಾಲಿನಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಕೂಡ್ಲಿಗಿ ಉಪ ವಿಭಾಗದ ಕಿರಿಯ ಅಭಿಯಂತರರಾದ ಬಿ.ಅಶೋಕ (R.4), ಗ್ರಾಮಪಂಚಾಯಿತಿ ಅಧ್ಯಕ್ಷರಾದ ಎಂ.ಸಿ.ಪ್ರಸನ್ನಕುಮಾರ (R.6) ಮತ್ತು ಪಿಡಿಓ ದಿಲೀಪಸಾಬ್ (R.1) ರವರ ಅವಧಿಯಲ್ಲಿ ತುಂಡು ಗುತ್ತಿಗೆ ಕಾಮಗಾರಿಗಳಲ್ಲಿ ನಕಲಿ ಬಿಲ್ಲು ಸೃಷ್ಟಿಸಿ ಒಟ್ಟು ರೂ.1,58,311/- ಮೊತ್ತದ ದುರ್ಬಳಕೆ ಮಾಡಿಕೊಂಡಿರುವುದು ಸಾಕ್ಷಿದಾರರ ಹೇಳಿಕೆಗಳಿಂದ ಮತ್ತು ದಾಖಲಾತಿಗಳಿಂದ ದೃಢಪಟ್ಟಿರುತ್ತದೆ.

6. 2014-15ನೇ ಸಾಲಿನಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಕೂಡ್ಲಿಗಿ ಉಪ ವಿಭಾಗದ ಕಿರಿಯ ಅಭಿಯಂತರರಾದ ಎಂ.ಬಸವನಗೌಡ, (R.5) ಗ್ರಾಮಪಂಚಾಯಿತಿ ಅಧ್ಯಕ್ಷರಾದ ಎಂ.ಸಿ.ಪ್ರಸನ್ನಕುಮಾರ (R.6) ಮತ್ತು ಪಿಡಿಓ ನಾರಾಯಣಪ್ಪ (R.3) ರವರ ಅವಧಿಯಲ್ಲಿ ತುಂಡು ಗುತ್ತಿಗೆ ಕಾಮಗಾರಿಗಳಲ್ಲಿ ನಕಲಿ ಬಿಲ್ಲು ಸೃಷ್ಟಿಸಿ ಒಟ್ಟು ರೂ.1,15,036/- ಮೊತ್ತದ ದುರ್ಬಳಕೆ ಮಾಡಿಕೊಂಡಿರುವುದು ಸಾಕ್ಷಿದಾರರ ಹೇಳಿಕೆಗಳಿಂದ ಮತ್ತು ದಾಖಲಾತಿಗಳಿಂದ ದೃಢಪಟ್ಟಿರುತ್ತದೆ.

೨೭೩



7. 2014-15ನೇ ಸಾಲಿನಲ್ಲಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಕೂಡ್ಲಿಗಿ ಉಪ ವಿಭಾಗದ ಕಿರಿಯ ಅಭಿಯಂತರರಾದ ಎಂ.ಬಸವನಗೌಡ, (R.5) ಗ್ರಾಮಪಂಚಾಯಿತಿ ಅಧ್ಯಕ್ಷರಾದ ಎಂ.ಸಿ.ಪ್ರಸನ್ನಕುಮಾರ (R.6) ಮತ್ತು ಪಿಡಿಓ ದಿಲೀಪಸಾಬ್ (R.1) ರವರ ಅವಧಿಯಲ್ಲಿ ಕುಡಿಯುವ ನೀರಿಗಾಗಿ ಜಲ ಮೂಲ ಕೊರೆಸಿದ್ದರಲ್ಲಿ ನಕಲಿ ಬಿಲ್ಲು ಸೃಷ್ಟಿಸಿ ಮೊತ್ತ ರೂ.95,000/- ಹಣವು ದುರ್ಬಳಕೆ ಮಾಡಿಕೊಂಡಿರುವುದು ಸಾಕ್ಷಿದಾರರ ಹೇಳಿಕೆಗಳಿಂದ ಮತ್ತು ದಾಖಲಾತಿಗಳಿಂದ ದೃಢಪಟ್ಟಿರುತ್ತದೆ.

8. 2014-15 ರಲ್ಲಿ ತುಂಡು ಗುತ್ತಿಗೆ ಕಾಮಗಾರಿಗಳಲ್ಲಿ ಶಾಸನ ಬದ್ಧ ಮುರುವಳಿಗಳ ಮೊತ್ತ ರೂ.50,783/- ಗಳ ಮೊತ್ತವನ್ನು ಸರಕಾರಕ್ಕೆ ಪಾವತಿಸದೇ ಪಂಚಾಯತ್ ರಾಜ್ ಇಂಜಿನಿಯರಿಂಗ್ ಕೂಡ್ಲಿಗಿ ಉಪ ವಿಭಾಗದ ಕಿರಿಯ ಅಭಿಯಂತರರಾದ ಎಂ.ಬಸವನಗೌಡ (R.5) ಮತ್ತು ಅಶೋಕ (R.4) ರವರು ದುರ್ಬಳಕೆ ಮಾಡಿಕೊಂಡಿರುವುದು ದಾಖಲಾತಿಗಳಿಂದ ದೃಢಪಟ್ಟಿರುತ್ತದೆ.

9. 2013-14ನೇ ಸಾಲಿನಲ್ಲಿ ರೂ.1,30,844/- ದುರ್ಬಳಕೆ ಮಾಡಿಕೊಂಡಿದ್ದು, 2013-14ನೇ ಸಾಲಿನಲ್ಲಿ ಒಟ್ಟು ರೂ.27,30,175/- ಗಳನ್ನು ವೆಚ್ಚ ಮಾಡಿದ್ದು, ಸದರಿ ಮೊತ್ತಕ್ಕೆ ಯಾವುದೇ ರೀತಿಯ ಬಿಲ್ಲುಗಳು/ಓಚರ್‌ಗಳು ಸಂದಾಯದ ವಹಿ, ದಾಸ್ತಾನು ವಹಿ ಮತ್ತು ಇತರೆ ದಾಖಲಾತಿಗಳು ಇಲ್ಲದೇ ಇರುವುದರಿಂದ, ಈ ವ್ಯವಹಾರಗಳಲ್ಲಿ ಅಕ್ರಮ ಮತ್ತು ಅವ್ಯವಹಾರದಿಂದಾಗಿ ಹಣ ದುರ್ಬಳಕೆ ಆಗಿರುವ ಸಾಧ್ಯತೆ ಇರುವುದರಿಂದ ಸದರಿ ದಾಖಲಾತಿಗಳನ್ನು ಪಂಚಾಯಿತಿಯಲ್ಲಿ ನಿರ್ವಹಿಸಿದ ಸಾಧ್ಯತೆಗಳಿಲ್ಲ. ಈ ಯಾವುದೇ ದಾಖಲಾತಿಗಳನ್ನು ತನಿಖೆಗಾಗಿ ನೀಡಿರುವುದಿಲ್ಲ.

10. 2014-15ರ ಸಾಲಿನಲ್ಲಿ ಒಟ್ಟು ರೂ.15,91,898/- ಮೊತ್ತದ ಸರಕಾರದ ಹಣ ದುರ್ಬಳಕೆ ಆಗಿರುವುದು ಸಾಕ್ಷಿದಾರರ ಹೇಳಿಕೆಗಳಿಂದ ಮತ್ತು ದಾಖಲಾತಿಗಳಿಂದ ದೃಢಪಟ್ಟಿರುತ್ತದೆ.

11. ಮೇಲ್ಕಂಡ ಎಲ್ಲಾ ದಾಖಲಾತಿಗಳನ್ನು ಪರಿಶೀಲಿಸಲಾಗಿ, ಕರ್ನಾಟಕ ಪಂಚಾಯತ್ ರಾಜ್ ಅಧಿನಿಯ, ಕರ್ನಾಟಕ ಪಾರದರ್ಶಕ ಅಧಿನಿಯಮ, ಪಂಚಾಯಿತಿಯಲ್ಲಿ ಸರಿಯಾದ ದಾಖಲಾತಿಗಳನ್ನು ನಿರ್ವಹಿಸದೇ ಇರುವುದು, ನಕಲಿ ಬಿಲ್ಲು ಸೃಷ್ಟಿಸಿ ಮತ್ತು ಸರಕಾರದ ಹಣವನ್ನು ದುರ್ಬಳಕೆ ಮಾಡಿಕೊಂಡಿರುವುದು ದಾಖಲಾತಿಗಳಿಂದ ದೃಢಪಟ್ಟಿರುತ್ತದೆ.

12. ನಿಧಿ-1 ರಲ್ಲಿ ವೈಯಕ್ತಿಕವಾಗಿ ಹಣ ಸಂದಾಯವಾಗಿರುತ್ತದೆ.

13. ಜಂಟಿ ನಿರ್ದೇಶಕರು, ಸ್ಥಳೀಯ ಲೆಕ್ಕ ಪರಿಶೋಧನಾ ವರ್ತುಲ, ಬಳ್ಳಾರಿ ರವರು ಹಿರೇಕುಂಬಲಕುಂಟೆ ಗ್ರಾಮ ಪಂಚಾಯಿತಿಯ 2013-14 ಮತ್ತು 2014-15ನೇ ಸಾಲಿನ ಲೆಕ್ಕ ತಪಾಸಣಾ ಮಾಡಿದ ವಿವಿಧ ಹಣಕಾಸು ಯೋಜನೆಯ ಅಡಿಯಲ್ಲಿ 2013-14ರ ಸಾಲಿನಲ್ಲಿ ರೂ.9,94,708/- ಮತ್ತು 2014-15 ರಲ್ಲಿ ರೂ.42,41,938/- ಗಳ ಮೊತ್ತಕ್ಕೆ ಆಕ್ಷೇಪಣೆ ಮಾಡಿ ವರದಿ ಸಲ್ಲಿಸಿರುತ್ತಾರೆ.

6. ಸದರಿ ಅರ್ಜಿ ವಿಚಾರಣೆ ಕಾಲಕ್ಕೆ ಸಂಗ್ರಹಿಸಿದ ದಾಖಲಾತಿಗಳಿಂದ ಮತ್ತು ಸಾಕ್ಷಿದಾರರ ಹೇಳಿಕೆಗಳಿಂದ ಕಂಡುಬರುವುದೇನೆಂದರೆ, ಅರ್ಜಿದಾರರು ಆಪಾದಿಸಿರುವಂತೆ ಹಿರೇಕುಂಬಳಗುಂಟೆ ಗ್ರಾಮ ಪಂಚಾಯಿತಿಯಲ್ಲಿ 2013-14 ಮತ್ತು 2014-15ನೇ ಸಾಲಿನಲ್ಲಿ 13ನೇ ಹಣಕಾಸು ಮತ್ತು ನಿಧಿ-1 ರಲ್ಲಿನ ಅನುದಾನದ ಬಳಕೆಯಲ್ಲಿ ಒಟ್ಟು ಅಂದಾಜು ರೂ.17,72,742/- ಗಳ ಸರ್ಕಾರದ ಹಣವನ್ನು ಅಧಿಕಾರ ದುರುಪಯೋಗ ಪಡಿಸಿಕೊಂಡು ಹಣ ದುರ್ಬಳಕೆ ಮಾಡಿಕೊಂಡು ಸರ್ಕಾರದ ಬೊಕ್ಕಸಕ್ಕೆ ನಷ್ಟವನ್ನುಂಟುಮಾಡಿದ್ದು, ಅಲ್ಲದೆ ಇನ್ನುಳಿದ ವೆಚ್ಚದಲ್ಲಿ

ನಿಯಮ ಬಾಹಿರವಾಗಿ, ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, ಕರ್ನಾಟಕ ಪಾರದರ್ಶಕ ಅಧಿನಿಯಮ ಉಲ್ಲಂಘನೆ, ಪಂಚಾಯಿತಿಯಲ್ಲಿ ಸರಿಯಾದ ದಾಖಲಾತಿಗಳನ್ನು ನಿರ್ವಹಿಸದೇ ಇರುವುದು, ದಾಸ್ತಾನು ಪುಸ್ತಕ ನಿರ್ವಹಿಸದೇ ಇರುವುದು, ಕಾಮಗಾರಿಗಳ ನಕಲಿ ಬಿಲ್ಲು ಸೃಷ್ಟಿಸಿ ಹಣ ದುರುಪಯೋಗ ಪಡಿಸಿಕೊಂಡಿರುವುದು, ಜಂಟಿ ನಿರ್ದೇಶಕರು, ಲೆಕ್ಕ ಪರಿಶೋಧನಾ ವರ್ತುಲ, ಬಳ್ಳಾರಿರವರು ಕೂಡ ವಿವಿಧ ಯೋಜನೆಯಡಿಯಲ್ಲಿ 2013-14 ರಲ್ಲಿ ರೂ.9,94,708/- ಹಾಗೂ 2014-15 ರಲ್ಲಿ ರೂ.42,41,938/- ಗಳ ಮೊತ್ತಕ್ಕೆ ಆಕ್ಷೇಪಣೆ ಮಾಡಿ ವರದಿ ಸಲ್ಲಿಸಿರುತ್ತಾರೆ ಮತ್ತು ಸರಕಾರದ ಹಣವನ್ನು ದುರ್ಬಳಕೆ ಮಾಡಿಕೊಂಡಿರುವುದು ಸಾಕ್ಷಿದಾರರ ಹೇಳಿಕೆ ಮತ್ತು ದಾಖಲಾತಿಗಳಿಂದ ದೃಢಪಟ್ಟಿರುತ್ತದೆ. ಕಾರಣ ಸದರಿ ಅವಧಿಯಲ್ಲಿ ಹಿರೇಕುಂಬಳಗುಂಟೆ ಗ್ರಾಮ ಪಂಚಾಯಿತಿಯಲ್ಲಿ ಕರ್ತವ್ಯ ನಿರ್ವಹಿಸಿದ ಪಿ.ಡಿ.ಓ.ಗಳಾದ ಹೆಚ್.ಬೋರಯ್ಯ, ಬಿ.ದಿಲೀಪ್‌ಸಾಬ್ ಮತ್ತು ಸಿ.ನಾರಾಯಣಪ್ಪ, ಸದರಿ ಅವಧಿಯಲ್ಲಿ ಅಧ್ಯಕ್ಷರಾಗಿ ಎಂ.ಸಿ.ಪ್ರಸನ್ನಕುಮಾರ ಮತ್ತು ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಕೂಡ್ಲಿಗಿಯ ಕಿರಿಯ ಅಭಿಯಂತರರಾದ ಬಿ.ಅಶೋಕ ಮತ್ತು ಎಂ.ಬಸವನಗೌಡ ರವರ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಲು ಸದರಿ ಅರ್ಜಿ ವಿಚಾರಣೆ ವರದಿಯಲ್ಲಿ ತನಿಖಾಧಿಕಾರಿ ಹೇಳಿರುತ್ತಾರೆ.

7. ಸದರಿ ವರದಿಯ ಪ್ರಕಾರ ದೂರಿನಲ್ಲಿ ಹೇಳಲಾದ 2013-14 ಮತ್ತು 2014-15ನೇ ಸಾಲಿನಲ್ಲಿ ಈ ಕೆಳಕಂಡಂತೆ ಈ ಕೆಳಗಿನ ಅಧಿಕಾರಿಗಳು ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಅಧ್ಯಕ್ಷರು ಮತ್ತು ಕಿರಿಯ ಇಂಜಿನಿಯರುಗಳಾಗಿ ಕರ್ತವ್ಯ ನಿರ್ವಹಿಸಿರುವುದಾಗಿ ವರದಿಯ ಪುಟ ಸಂ.55 ರಲ್ಲಿ ಹೇಳಲಾಗಿದೆ.

| ಕ್ರ.ಸಂ. | ಪಂಚಾಯಿತಿ ಹೆಸರು | ಅಧಿಕಾರಿಯ ಹೆಸರು | ಹುದ್ದೆ | ಅವಧಿ |
|---|---|---|---|---|
| 1 | ಹಿರೇಕುಂಬಳಕುಂಟೆ | ಶ್ರೀ.ಎಂ.ಸಿ.ಪ್ರಸನ್ನಕುಮಾರ | ಗ್ರಾ.ಪಂ.ಅಧ್ಯಕ್ಷರು | 1/1/13 ರಿಂದ 27/6/15 |
| 2 | ಹಿರೇಕುಂಬಳಕುಂಟೆ | ಶ್ರೀಮತಿ.ದುರುಗಮ್ಮ | ಗ್ರಾ.ಪಂ.ಅಧ್ಯಕ್ಷರು | 27/6/15 ರಿಂದ 31/3/16 |
| 3 | ಹಿರೇಕುಂಬಳಕುಂಟೆ | ಶ್ರೀ.ಹೆಚ್.ಬೋರಯ್ಯ | ಪಿ.ಡಿ.ಓ | 1/1/13 ರಿಂದ 21/2/2014 |
| 4 | ಹಿರೇಕುಂಬಳಕುಂಟೆ | ಶ್ರೀ.ಬಿ.ದಿಲೀಪ್‌ಸಾಬ್ | ಪಿ.ಡಿ.ಓ | 3/3/14 ರಿಂದ 31/12/14 |
| 5 | ಹಿರೇಕುಂಬಳಕುಂಟೆ | ಶ್ರೀ.ಹೆಚ್.ಸಿ.ನಾರಾಯಣಪ್ಪ | ಪಿ.ಡಿ.ಓ | 1/1/15 ರಿಂದ 31/3/2016 |
| 6 | ಹಿರೇಕುಂಬಳಕುಂಟೆ | ಶ್ರೀ.ಬಿ.ಅಶೋಕ್ | ಕಿರಿಯ ಇಂಜಿನಿಯರ್ | 1/1/13 ರಿಂದ 30/8/2014 |
| 7 | ಹಿರೇಕುಂಬಳಕುಂಟೆ | ಶ್ರೀ.ಎಂ.ಬಸವನಗೌಡ | ಕಿರಿಯ ಇಂಜಿನಿಯರ್ | 1/9/14 ರಿಂದ 31/7/2014 |

8. ದಿ.1/1/13 ರಿಂದ 27/6/2015 ರವರೆಗೆ ಶ್ರೀ.ಎನ್.ಸಿ.ಪ್ರಸನ್ನಕುಮಾರ್ ಎನ್ನುವವರು ಗ್ರಾಮಪಂಚಾಯಿತಿ ಅಧ್ಯಕ್ಷರಾಗಿದ್ದು, ಅವರ ಅವಧಿಯಲ್ಲಿ ಅವ್ಯವಹಾರವಾಗಿರುವ ಬಗ್ಗೆ ವರದಿಯಲ್ಲಿ ಹೇಳಿದ್ದು, ದಾಖಲಾತಿಗಳನ್ನು ಹಾಜರು ಪಡಿಸಲಾಗಿದೆ. ಶ್ರೀ.ಹೆಚ್.ಬೋರಯ್ಯ ಮತ್ತು ಶ್ರೀ.ಹೆಚ್.ಸಿ.ನಾರಾಯಣಪ್ಪ ಇವರುಗಳ ಅವಧಿಯಲ್ಲಿಯೂ ಹಣದ ಅವ್ಯವಹಾರವಾಗಿರುವ ಬಗ್ಗೆ ವರದಿ ಮತ್ತು ದಾಖಲಾತಿಗಳನ್ನು ಸಲ್ಲಿಸಲಾಗಿದೆ. ಈ ಮೇಲೆ ಹೇಳಿದ ಕಿರಿಯ ಇಂಜಿನಿಯರ್‌ರವರ

ಅವಧಿಯಲ್ಲಿ ನಡೆದ ಸಿವಿಲ್ ಕಾಮಗಾರಿಗಳು ಮತ್ತು ಅದರಲ್ಲಿ ಆಗಿರುವ ಅವ್ಯವಹಾರಗಳಿಗೆ ಪುಟ ಸಂ.44 ರಿಂದ 50 ರಲ್ಲಿ ಹೇಳಲಾಗಿದೆ. ಆದ್ದರಿಂದ, ತನಿಖಾಧಿಕಾರಿಯವರ ವರದಿಯನ್ನು ಪರಿಶೀಲಿಸಿದಾಗ, ಅಂದಿನ ಪಿ.ಡಿ.ಓ.ಗಳಾದ ಶ್ರೀ.ಹೆಚ್.ಬೋರಯ್ಯ ಮತ್ತು ಶ್ರೀ.ಹೆಚ್.ಸಿ.ನಾರಾಯಣಪ್ಪ, ಅಧ್ಯಕ್ಷರಾಗಿದ್ದ ಶ್ರೀ.ಎನ್.ಸಿ.ಪ್ರಸನ್ನಕುಮಾರ್ ಹಾಗೂ ಕಿರಿಯ ಅಭಿಯಂತರರಾದ ಶ್ರೀ.ಬಿ.ಅಶೋಕ ಮತ್ತು ಶ್ರೀ.ಎಂ.ಬಸವನಗೌಡ ರವರುಗಳು ಅಗತ್ಯ ಪಕ್ಷಗಾರರಾಗಿರುತ್ತಾರೆ.

9. ದಿ.20/12/2018 ರ ಪತ್ರದಲ್ಲಿ ಇದೇ ವಿಷಯಕ್ಕೆ ಸಂಬಂಧಿಸಿದಂತೆ ಡಿ.ಇ–337/2017/ಎ.ಆರ್.ಇ–10 ರಲ್ಲಿ ಇಲಾಖಾ ವಿಚಾರಣೆ ಕೈಗೊಳ್ಳಲಾಗಿದೆಯೆಂದು ತಿಳಿಸಿರುತ್ತಾರೆ. ಸದರಿ ಇಲಾಖಾ ವಿಚಾರಣೆಯ Inquiry Status ನ್ನು ಅಂತರ್ಜಾಲದಲ್ಲಿ ಪರಿಶೀಲಿಸಿದಾಗ, ಸದರಿ ಇಲಾಖಾ ವಿಚಾರಣೆಯಲ್ಲಿಯೂ ಪ್ರಸ್ತುತ ಎದುರುದಾರರು ಮಾತ್ರ ಆರೋಪಿತ ನೌಕರ/ಪಕ್ಷಗಾರರಾಗಿರುವುದು ಕಂಡುಬರುತ್ತದೆ. ಆದ್ದರಿಂದ, ಕಂಪ್ಲೆಂಟ್/ಜಿಎಲ್‌ಬಿ–3890/2014/ಡಿಆರ್‌ಇ–5 ದೂರು ಹಾಗೂ ಇತರ ದಾಖಲಾತಿಗಳು ಮತ್ತು ವರದಿಯ ಪರಿಶೀಲನೆ ಮಾಡುವುದು ಅಗತ್ಯವೆಂದು ಕಂಡುಬರುತ್ತದೆ.

10. ಆದ್ದರಿಂದ, ಪಿ.ಡಿ.ಓ.ಗಳಾದ ಶ್ರೀ.ಹೆಚ್.ಬೋರಯ್ಯ ಮತ್ತು ಶ್ರೀ.ಹೆಚ್.ಸಿ.ನಾರಾಯಣಪ್ಪ, ಕಿರಿಯ ಅಭಿಯಂತರರಾದ ಶ್ರೀ.ಬಿ.ಅಶೋಕ ಮತ್ತು ಶ್ರೀ.ಎಂ.ಬಸವನಗೌಡ ಹಾಗೂ ಅಧ್ಯಕ್ಷರಾಗಿದ್ದ ಶ್ರೀ.ಎನ್.ಸಿ.ಪ್ರಸನ್ನಕುಮಾರ್ ಇವರುಗಳನ್ನು 2 ರಿಂದ 6 ನೇ ಎದುರುದಾರರನ್ನಾಗಿ ಸೇರ್ಪಡೆಗೊಳಿಸಿ ಅವರಿಗೆ ಆಕ್ಷೇಪಣೆ ಮತ್ತು ಸೇವಾ ವಿವರಗಳನ್ನು ಸಲ್ಲಿಸುವಂತೆ ಆದೇಶಿಸಲಾಯಿತು.

11. ಎದುರುದಾರರು ಆಕ್ಷೇಪಣೆ ಮತ್ತು ದಾಖಲಾತಿಗಳ ಪ್ರತಿಗಳನ್ನು ಸಲ್ಲಿಸಿರುತ್ತಾರೆ. ತಮ್ಮ ವಿರುದ್ಧದ ಆಪಾದನೆಗಳನ್ನು ಅಲ್ಲಗಳೆದಿರುತ್ತಾರೆ ಮತ್ತು ಇದೇ ಪ್ರಕರಣಕ್ಕೆ ಸಂಬಂಧಪಟ್ಟಂತೆ ಕಂಪ್ಲೆಂಟ್/ ಉಪಲೋಕ್/ಜಿಎಲ್‌ಬಿ–3890/2014 ದಾಖಲಾಗಿದ್ದು, ಅದರಲ್ಲಿ ಸದರಿ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ನಡೆದಿದೆಯೆನ್ನುವ ವಿಚಾರವನ್ನು ತಿಳಿಸಿರುತ್ತಾರೆ.

12. ಸದರಿ ಎದುರುದಾರರು ತಮ್ಮ ಆಕ್ಷೇಪಣೆಗಳಲ್ಲಿ ದೂರುದಾರರು ತಮ್ಮ ದೂರಿನಲ್ಲಿ 1ನೇ ಎದುರುದಾರರು ಮತ್ತು ಎನ್.ಸಿ.ಪ್ರಸನ್ನಕುಮಾರ್ ರವರ ವಿರುದ್ಧ ಮಾತ್ರ ಆಪಾದನೆ ಮಾಡಿರುವುದರಿಂದ ತಮ್ಮನ್ನು ಈ ಪ್ರಕರಣದಿಂದ ಕೈಬಿಡಬೇಕೆಂದು ಕೇಳಿಕೊಂಡಿರುತ್ತಾರೆ. ಮುಂದುವರೆದು 3ನೇ ಎದುರುದಾರರು ಈಗಾಗಲೇ ಇದೇ ಅವಧಿಯಲ್ಲಿನ ಇದೇ ಆಪಾದನೆಗಳ ಬಗ್ಗೆ ಜಿಎಲ್‌ಬಿ–3890/2014 ರಲ್ಲಿ ತನಿಖೆ ನಡೆದು 12(3) ರ ವರದಿಯನ್ವಯ ಇಲಾಖಾ ವಿಚಾರಣೆ ನಡೆದಿರುವುದರಿಂದ, ಈ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೋರಿರುತ್ತಾರೆ.

13. ಜಿಎಲ್‌ಬಿ-3890/2014 ರ ಕಡತವನ್ನು ಪರಿಶೀಲಿಸಿದ್ದು, ಅದರಲ್ಲಿ ಈ ಕೆಳಕಂಡ 4 ಆಪಾದನೆಗಳ ಬಾಬ್ತು ಮಾತ್ರ ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರಡಿಯಲ್ಲಿ ವರದಿ ಸಲ್ಲಿಸಿರುತ್ತಾರೆ.

1) ಹಿರೇ ಕುಂಬಳಗುಂಟೆ ಗ್ರಾಮ ಪಂಚಾಯತಿಯ 2013-14 ಮತ್ತು 2014-15ರ ಸಾಲಿನ 13ನೇ ಹಣಕಾಸು ಯೋಜನೆ ಹಾಗೂ ನಿಧಿ.1 ರಲ್ಲಿ ಬೀದಿ ದೀಪ ಮತ್ತು ಕುಡಿಯುವ ನೀರಿನ ಸಾಮಗ್ರಿಗಳ ಖರೀದಿಯಲ್ಲಿ ಅವ್ಯವಹಾರ ಎಸಗಿದ್ದಾರೆ.
2) ಬಸವ ವಸತಿ ಯೋಜನೆಯಡಿ ಶ್ರೀಮತಿ.ಜಯಶ್ರೀ ಶರಣಪ್ಪ ಇವರಿಗೆ ಮಂಜೂರಾದ ಮನೆಯನ್ನು ಗಂಗಾಧರಯ್ಯ ಅವರ ಹೊಲದಲ್ಲಿ ನಿರ್ಮಿಸಿದ್ದಾರೆ.
3) ಬಸವ ವಸತಿ ಯೋಜನೆಯಡಿ ಶ್ರೀಮತಿ.ಬಸಮ್ಮ ಕೋಂ ಸೋಮಶೇಖರಪ್ಪ ಇವರಿಗೆ ಬುನಾದಿಯ ಹಂತದವರೆಗೆ ಮಾತ್ರ ಬಿಡುಗಡೆ ಮಾಡಬೇಕಾದ ಸಹಾಯಧನದ ಕಂತನ್ನು ಲಿಂಟಲ್ ಹಂತದವರೆಗೆ ನಿರ್ಮಿಸಿರುತ್ತಾರೆಂದು ಪರಿಗಣಿಸಿ ಹೆಚ್ಚುವರಿ ಸಹಾಯಧನದ ಕಂತನ್ನು ಬಿಡುಗಡೆ ಮಾಡಿರುತ್ತಾರೆ.
4) ಇಂದಿರಾ ಆವಾಸ ಮತ್ತು ಬಸವ ವಸತಿ ಯೋಜನೆಯಡಿ ಮನೆಗಳ ನೋಂದಣಿಗಾಗಿ ಹೆಚ್ಚುವರಿ ನೋಂದಣಿ ಶುಲ್ಕ ವಸೂಲು ಮಾಡಿದ್ದಾರೆ.

14. ಸದರಿ 4 ಆಪಾದನೆಗಳ ವಿಚಾರಣೆ ನಡೆಸಲು ಸರ್ಕಾರದ ಆದೇಶ ಸಂ.ಗ್ರಾಅಪ 90 ಗ್ರಾಪಂಕಾ 2017 ದಿ.18/2/2017 ರ ಪ್ರಕಾರ 1ನೇ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಸರ್ಕಾರದ ಆದೇಶ ಸ್ವೀಕೃತವಾಗಿದ್ದು, ಅದರಂತೆ ಡಿಇ-337/17 ರಲ್ಲಿ ಎ.ಆರ್.ಇ-10 ರವರ ಮುಂದೆ ವಿಚಾರಣೆ ನಡೆದಿರುತ್ತದೆ. ಆದರೆ ಪ್ರಸ್ತುತ ಪ್ರಕರಣದಲ್ಲಿ ವಿಚಾರಣಾಧಿಕಾರಿಯವರು ಸಲ್ಲಿಸಿರುವ ವಿಸ್ತೃತ ವರದಿ ಮತ್ತು ದಾಖಲೆಗಳನ್ನು ಪರಿಶೀಲಿಸಿದಾಗ, ಜಿಎಲ್‌ಬಿ-3890/2014 ರಲ್ಲಿ ಮಾಡಿರುವ ಆಪಾದನೆಗಳು ಮತ್ತು ತನಿಖಾ ವರದಿಗಿಂತ ವಿಭಿನ್ನವಾಗಿ ಮತ್ತು ವಿಸ್ತೃತವಾಗಿ ಬೇರೆ ವಿಷಯಗಳ ಬಗ್ಗೆಯೂ ವರದಿ ಸಲ್ಲಿಸಿದ್ದು, ಪ್ರಸ್ತುತ 1 ರಿಂದ 6ನೇ ಎದುರುದಾರರು ತಮ್ಮ ಕರ್ತವ್ಯದ ಅವಧಿಯಲ್ಲಿ ಹಣ ದುರುಪಯೋಗ ಪಡಿಸಿಕೊಂಡಿರುವ ಬಗ್ಗೆ ದಾಖಲಾತಿಗಳನ್ನು ಹಾಜರು ಪಡಿಸಿರುತ್ತಾರೆ ಮತ್ತು ವರದಿಯಲ್ಲಿ ಉಲ್ಲೇಖಿಸಿರುತ್ತಾರೆ. ಆದ್ದರಿಂದ, ಜಿಎಲ್‌ಬಿ-3890/2014 ರಲ್ಲಿ ನೀಡಿದ ನಡವಳಿಗಳು ಈ ಪ್ರಕರಣದ ತನಿಖೆ ಮುಂದುವರೆಸಲು ಯಾವುದೇ ರೀತಿ ಬಾಧಕವಾಗುವುದಿಲ್ಲ.

15. ತುಂಡು ಗುತ್ತಿಗೆ ಕಾಮಗಾರಿಯನ್ನು ಶ್ರೀ.ಬಿ.ಇ.ಜಗದೀಶ್ ರವರು ನಿರ್ವಹಿಸಿದ ಬಗ್ಗೆ ದಾಖಲಾತಿ ಇದ್ದು ಕಾಮಗಾರಿಯಲ್ಲಿ ಪ್ರಸ್ತಾವನೆ ಪ್ರತಿ ಇಲ್ಲ, ಕಾಂಟ್ರಾಕ್ಟ್ ಸರ್ಟಿಫಿಕೇಟ್‌ನಲ್ಲಿ ಗುತ್ತಿಗೆದಾರರ ಸಹಿ ಇಲ್ಲ. ಅಂದಾಜು ಪಟ್ಟಿಯ ಮೊದಲ ಪ್ರತಿಯಲ್ಲಿ ಬಿ.ಟಿ.ಗುದ್ದಿ ಗ್ರಾಮದಲ್ಲಿ ಹೊಸ ಪೈಪ್‌ಲೈನ್ ಮಾಡುವುದು ಎನ್ನುವುದು, ಹೊಸ ಪೈಪ್‌ಲೈನ್ ಮಾಡುವುದನ್ನು ತಿದ್ದಿ ಚರಂಡಿ ಹೂಳು ಎತ್ತುವುದು ಎಂದು ಬರೆದಿದ್ದು, ಅದೇರೀತಿ 2ನೇ ಪುಟದಲ್ಲಿ ಹೊಸ ಪೈಪ್‌ಲೈನ್ ಮಾಡುವುದರ ಅಂದಾಜುಪಟ್ಟಿ ಇರುತ್ತದೆ. ಪೀಸ್ ವರ್ಕ್ ಅಗ್ರಿಮೆಂಟ್‌ನ ಫಾರಂ ನಂ.64 ಇಲ್ಲ, ಷೆಡ್ಯೂಲ್-8 ಫಾರಂ ಪ್ರತಿ ಇಲ್ಲ, ಪೀಸ್ ವರ್ಕ್ ಅಗ್ರಿಮೆಂಟ್ ಬಾಂಡ್ ಪೇಪರ್‌ನಲ್ಲಿ

ಗುತ್ತಿಗೆದಾರನ ಸಹಿ ಇರುವುದಿಲ್ಲ. ಫಾರಂ-46 ವರ್ಕ್ ಕಂಪ್ಲೀಷನ್ ಪ್ರತಿ ಇಲ್ಲ, ಈ ಕಾಮಗಾರಿಯಲ್ಲಿ ಗುತ್ತಿಗೆದಾರರಾದ ಶ್ರೀ.ಬಿ.ಇ.ಜಗದೀಶ್‌ರವರೊಂದಿಗೆ ಕಿರಿಯ ಅಭಿಯಂತರರಾದ ಶ್ರೀ.ಅಶೋಕ್ ಮತ್ತು ಪಿ.ಡಿ.ಓ, ಶ್ರೀ.ದಿಲೀಪ್‌ಸಾಬ್ ಮತ್ತು ಅಧ್ಯಕ್ಷ ಶ್ರೀ.ಪ್ರಸನ್ನಕುಮಾರ್‌ರವರು ಸೇರಿಕೊಂಡು ಅಕ್ರಮ ನಡೆಸಿರುತ್ತಾರೆ. ಅದಕ್ಕೆ ಪ್ರತಿಯಾಗಿ 4ನೇ ಎದುರುದಾರರು ಉತ್ತರಿಸಿದ್ದು, ಸದರಿ ಉಳಿದಿರುವ ಕೆಲಸಕ್ಕೆ ಸಂಬಂಧಿಸಿದಂತೆ ಪಿ.ಡಿ.ಓ. ರವರು ಅಂದಾಜು ಪಟ್ಟಿಯನ್ನಷ್ಟೇ ತಯಾರಿಸಿ ಕಾಮಗಾರಿ ಮಾಡಿಸಿರುತ್ತೇನೆ, ಇನ್ನು ಆಡಳಿತಾತ್ಮಕ ವಿಷಯಗಳಾದ ಕಾಮಗಾರಿಗೆ ಪ್ರಸ್ತಾವನೆ ಮಾಡುವುದು, ಅಗ್ರಿಮೆಂಟ್ ಮಾಡುವುದು ಇನ್ನಿತರ ಜವಾಬ್ದಾರಿಗಳು ಪಿ.ಡಿ.ಓ. ರವರ ವ್ಯಾಪ್ತಿಯದಾಗಿರುತ್ತದೆ. ಅದೇರೀತಿ ಹಣಕಾಸಿನ ವ್ಯವಹಾರಗಳೂ ಸಹ ಸದರಿಯವರ ವ್ಯಾಪ್ತಿಗೆ ಬರುವುದಿಲ್ಲ. ಆ ಕುರಿತು ಕ್ರಸಂ.2 ಮತ್ತು 3 ರಲ್ಲಿ ಅಂದಾಜು ಪಟ್ಟಿಗಳು ಅದಲು ಬದಲಾಗಿರುತ್ತವೆ.

16. ಸದರಿ ಕಾಮಗಾರಿಯ ಕುರಿತು ಗ್ರಾಮ ಪಂಚಾಯಿತಿಯಿಂದ ಅನುಮೋದನೆ ಪಡೆದುಕೊಂಡು ಕಾಮಗಾರಿ ನಿರ್ವಹಿಸಿ, ಸಂಬಂಧಪಟ್ಟ ಬಿಲ್ಲನ್ನು ಮತ್ತು ಭಾವಚಿತ್ರವನ್ನು ಪಂಚಾಯಿತಿಗೆ ಸಲ್ಲಿಸುವುದು ಸದರಿಯವರ ಕರ್ತವ್ಯವಾಗಿರುತ್ತದೆ. ಆದರೆ ದಾಖಲಾತಿ ನಿರ್ವಹಣೆ ಸದರಿಯವರಿಗೆ ಸಂಬಂಧಪಟ್ಟಿರುವುದಿಲ್ಲ. ಆದುದರಿಂದ ಸದರಿಯವರು ಯಾವುದೇ ಅಧಿಕಾರ ದುರುಪಯೋಗ ಪಡಿಸಿಕೊಂಡಿರುವುದಿಲ್ಲ.

17. 4ನೇ ಎದುರುದಾರರು ಹಾಜರುಪಡಿಸಿದ ಶೆಡ್ಯೂಲ್-ಎ ಪ್ರತಿ, ಕಾಂಟ್ರಾಕ್ಟ್ ಸರ್ಟಿಫಿಕೇಟ್‌ನ ಪ್ರತಿ, ಅಂದಾಜು ಪಟ್ಟಿಯ ಪ್ರತಿ, ಸಂಬಂಧಪಟ್ಟ ಅಧಿಕಾರಿಗಳ ಸಹಿ ಇರುವುದಿಲ್ಲವೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

18. 5ನೇ ಎದುರುದಾರರು ದಿ.7/2/2020 ರಂದು ಆಕ್ಷೇಪಣೆ ಸಲ್ಲಿಸಿದ್ದು, ಪ್ರಸ್ತುತ ದೂರಿಗೆ ಸಂಬಂಧಿಸಿದಂತೆ, ಹಿರೇಕುಂಬಳಗುಂಟೆ ಗ್ರಾಮ ಪಂಚಾಯಿತಿ, ತಾಲ್ಲೂಕು ಕೂಡ್ಲಿಗಿ, ಸದರಿ ಗ್ರಾಮ ಪಂಚಾಯಿತಿಯ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಪಂಚಾಯಿತಿಯ ಅಧ್ಯಕ್ಷರಾದ ಶ್ರೀ.ಪ್ರಸನ್ನಕುಮಾರ್ ಮತ್ತು ಪಿ.ಡಿ.ಓ, ಶ್ರೀ.ದಿಲೀಪ್‌ಸಾಬ್ ರವರ ಕಾಲಾವಧಿಯಲ್ಲಿ ಆದಂತಹ ಅವ್ಯವಹಾರಗಳಿಗೆ ಸದರಿಯವರು ಯಾವುದೇ ಸಂಬಂಧ ಇರುವುದಿಲ್ಲ. ಸದರಿ 5ನೇ ಎದುರುದಾರರು ಯಾವುದೇ ಅಕ್ರಮ ನಡೆದ ಬಗ್ಗೆಯಾಗಲೀ ಅಥವಾ ಆರ್ಥಿಕ ನಷ್ಟವಾಗಲೀ ಇರುವುದಿಲ್ಲ. ಸದರಿಯವರನ್ನು ಪ್ರಕರಣದಿಂದ ಮುಕ್ತಗೊಳಿಸುವಂತೆ ಕೋರಿರುತ್ತಾರೆ. ಈಗಾಗಲೇ ಸದರಿಯವರು ನಿವೃತ್ತಿ ಹೊಂದಿದ್ದು, ಯಾವುದೇ ಕರ್ತವ್ಯಲೋಪ ಎಸಗಿರುವುದಿಲ್ಲ.

19. ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಸದರಿಯವರು ಮತ್ತು ಕೆ.ಮಾರಪ್ಪ ರವರು ಮತ್ತು ಸಾಕ್ಷಿದಾರರ ಸಮೇತ ದಿ.26/8/2014 ರಂದು ದೂರು ಸಲ್ಲಿಸಿದ್ದು, ಪ್ರಸ್ತುತ ದೂರು ಸಾರ್ವಜನಿಕ ಹಿತಾಸಕ್ತಿಯ ದೂರಾಗಿದ್ದು, 2013-14ನೇ ಸಾಲಿನಲ್ಲಿ ಬೀದಿ ದೀಪಗಳಿಗೆ 8/13 ರಿಂದ

6/14 ರವರಗೆ ಸಂದಾಯಿಸಿದ ಮೊತ್ತ ರೂ.4.60 ಲಕ್ಷ ಮತ್ತು 9/14 ಕ್ರಿಯಾ ಯೋಜನೆಯಡಿ ಕಾಯ್ದಿರಿಸಿದ ಮೊತ್ತ ರೂ.1.48 ಲಕ್ಷಗಳಾಗಿರುತ್ತದೆ. ಸದರಿ ಹೊಸಹಳ್ಳಿ ಗು.ವಿ.ಪ್ರ.ಕ.ನಿ (ಬೆಸ್ಕಾಂ) ಕ್ಷೇತ್ರದ ಶಾಖಾಧಿಕಾರಿಗಳು ದಿ.13/1/2015 ರಂದು ತಿಳಿಸಿರುವ ಪ್ರಕಾರ ಮತ್ತು ಪಂಚಾಯಿತಿಯಲ್ಲಿ 638 ಕಂಬಗಳೆಂದು ಪರಿಗಣಿಸಿದರೂ ಸಹ ಒಂದು ದೀಪದ ಕಂಬಕ್ಕೆ ಒಂದು ವರ್ಷಕ್ಕೆ ರೂ.721/- ಖರ್ಚು ಬಂದಂತಾಗುತ್ತದೆ. ಅಲ್ಲದೆ ಸಿ,ಎಫ್.ಎಲ್. ಬಲ್ಬ್‌ಗಳಿಗೆ ಒಂದು ವರ್ಷದ ಅವಧಿಗೆ ಗ್ಯಾರಂಟಿ ಇರುತ್ತದೆ. ಆ ಕಾರಣ ಸರ್ಕಾರದವರು ಮಿತವ್ಯಯದ ದೃಷ್ಟಿಯಿಂದ ಸಿ.ಎಫ್.ಎಲ್.ಬಲ್ಬ್ ಗಳನ್ನೇ ಖರೀದಿಸುತ್ತಾರೆ. ಆದರೆ ಯಾವುದೇ ದಾಖಲಾತಿ ಇರುವುದಿಲ್ಲ. ಸಂಗ್ರಹಣಾ ರಿಜಿಸ್ಟರ್‌ನಲ್ಲಿ ದಾಖಲಾಗಿರುವುದಿಲ್ಲ. ಆ ಕಾರಣ ಉದ್ದೇಶಪೂರ್ವಕವಾಗಿ ಬೋಗಸ್ ಬಿಲ್‌ಗಳನ್ನು ತಯಾರಿಸಿ ಹಣ ಲೂಟಿ ಮಾಡಲು ವ್ಯವಸ್ಥಿತವಾಗಿ ಸಂಚಾಗಿರುತ್ತದೆಯೆಂದು ಕಂಡುಬರುತ್ತದೆ. ಶ್ರೀ ಮಹಾಲಕ್ಷ್ಮಿ ಎಲೆಕ್ಟ್ರಿಕಲ್ಸ್ ಮತ್ತು ಹಾರ್ಡ್‌ವೇರ್ ಹೊಸಹಳ್ಳಿ ಇವರಿಂದ ಪಡೆದಿರುವ ಬಿಲ್ ಬಗ್ಗೆ ಅಥವಾ ಯಾವುದೇ ಸಾಮಗ್ರಿ ಖರೀದಿಗಳಿಗಾಗಲೀ ಕೊಟೇಷನ್‌ಗಳನ್ನು ಕರೆದಿರುವುದಿಲ್ಲ. ಸದರಿ ಬಿಲ್‌ಗಳು ಸಹ ನಕಲು ಬಿಲ್‌ಗಳಾಗಿವೆ. ಅದೇರೀತಿ ಬಿಲ್‌ಗಳಿಗೆ ಯಾವುದೇ ದೃಢೀಕರಣವಾಗಿರುವುದಿಲ್ಲ. ನಿಧಿ.1 ರಲ್ಲಿಯೂ ಸಹ 3ನೇ ತಿಂಗಳು 2014 ರಿಂದ ಇಲ್ಲಿಯವರೆಗೆ ಹಣ ತೆಗೆದಿರುವ ಮೊತ್ತಗಳ ವಿವರಗಳನ್ನು ಪರಿಶೀಲಿಸಿದರೆ ಕಾನೂನು ಉಲ್ಲಂಘನೆಯಾಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. 2014-15ನೇ ಸಾಲಿನಲ್ಲಿ ಒಂದೇ ಆರ್ಥಿಕ ವರ್ಷದಲ್ಲಿ ಸುಮಾರು ರೂ.20 ಲಕ್ಷಗಳಷ್ಟು ಮೊತ್ತದ ಮೋಟಾರ್ ದುರಸ್ತಿ, ನೀರಿನ ಸಾಮಗ್ರಿಗಳ ಖರೀದಿ, ಕೈಪಂಪುಗಳ ಸಾಮಗ್ರಿ ಖರೀದಿ, ಇತ್ಯಾದಿ ಕಾಮಗಾರಿಗೆ ಹಣ ಸಂದಾಯವಾಗಿರುವುದು, ಆ ಕುರಿತು ಯಾವುದೇ ದಾಖಲಾತಿ ಅಳವಡಿಸಿಕೊಂಡಿರುವುದಿಲ್ಲ. ಸದರಿ ಪಂಚಾಯಿತಿ ವ್ಯಾಪ್ತಿಯಲ್ಲಿ 13 ಅಂಗನವಾಡಿಗಳಿಗೆ ಸುಮಾರು ರೂ.0.65 ಲಕ್ಷಗಳಷ್ಟು ಹಣ ಸಂದಾಯಿಸಿದೆ ಎನ್ನುವ ಕುರಿತು ಯಾವುದೇ ದಾಖಲಾತಿ ಇರುವುದಿಲ್ಲ. ಶಾಲೆಗಳ ಪೀಠೋಪಕರಣ ಖರೀದಿಗೆ ಸುಮಾರು ರೂ.2.95 ಲಕ್ಷ ಕಾಯ್ದಿರಿಸಿರುವ ಕುರಿತು ಯಾವುದೇ ದಾಖಲಾತಿ ಇರುವುದಿಲ್ಲ.

20. ಸರಬರಾಜು ಮಾಡಿಕೊಂಡಿರುವ 3ನೇ ತಿಂಗಳು 2014 ರಿಂದ 12ನೇ ತಿಂಗಳು 2014 ರವರೆಗೆ ಸಂದಾಯವಾದ ಎಲ್ಲಾ ಬಿಲ್ಲುಗಳಿಗೆ ಸರ್ಕಾರಿ ಕಡತಗಳ ಆದಾಯ ಮತ್ತು ಸರಬರಾಜು ತೆರಿಗೆಗಳನ್ನು ಮುರುವಳಿ ಮಾಡದೆ ಕ್ರಿಯಾ ಯೋಜನೆಯಲ್ಲಿ ಹಣಕ್ಕೆ ರೂ.50 ರಿಂದ 100 ಮಾತ್ರ ಕಡಿಮೆ ಮಾಡಿ ಚೆಕ್‌ಗಳು ಸಂದಾಯವಾಗಿರುತ್ತದೆ. ಆ ಕುರಿತು ಸರ್ಕಾರಕ್ಕೆ ನಷ್ಟವಾಗಿದೆ. 2014-15ನೇ ಸಾಲಿನಲ್ಲಿ ಮೂಲ ಕ್ರಿಯಾ ಯೋಜನೆಯ ಮೊತ್ತ ರೂ.9,80,234/- ಗಳಿದ್ದು, 27 ಕಾಮಗಾರಿಗಳಾಗಿದ್ದು, ಕಾರ್ಯನಿರ್ವಹಣೆ ಅಧ್ಯಕ್ಷರು, ಪಿ.ಡಿ.ಓ, ರವರು ನಡವಳಿಯಲ್ಲಿ ಸದರಿ ಮೊತ್ತ ನಿಗದಿಪಡಿಸಿ ಅದರಂತೆ 2013-14 ರಲ್ಲಿ ತಿದ್ದುಪಡಿ ಮಾಡಿ 27 ಕಾಮಗಾರಿಗಳನ್ನು 29 ಕಾಮಗಾರಿಗಳೆಂದು, ಸದರಿ ಮೊತ್ತ ರೂ.11,85,820/- ಗಳೆಂದು ತಿದ್ದುಪಡಿ

ಮಾಡಿರುತ್ತಾರೆ. ಅದರಂತೆ ಕ್ರ.ಸಂ.14 ನ್ನು ರೂ.50,000/- ಗಳಿಂದ ರೂ.95,000/- ಗಳಿಗೆ ಹೆಚ್ಚಿಗೆ ಮಾಡಿ ಸಂದಾಯಿಸಲಾಗಿದೆ. ಸದರಿ ತಿದ್ದುಪಡಿ ಅಪರಾಧವಾಗಿದೆಯೆಂದು ಪರಿಗಣಿಸಲಾಗಿದೆ. ಅದೇರೀತಿ 15 ಕಾಮಗಾರಿಗಳ ಬದಲಾಗಿ 20 ಕಾಮಗಾರಿಗಳೆಂದು, ರೂ.7,13,171/- ಬದಲಾಗಿ ಸದರಿ ಹಣಕ್ಕೆ ಬ್ಯಾಂಕ್ ಖಾತೆಗೆ ಜಮಾ ಮಾಡಿ ಅದನ್ನು ರೂ.11,21,074/- ಎಂದು ತಿದ್ದುಪಡಿ ಮಾಡಿರುತ್ತಾರೆ. ಸದರಿ ತಿದ್ದುಪಡಿ ಮಾಡಿರುವುದು ಅಪರಾಧವಾಗಿರುತ್ತದೆ. 2014-15ನೇ ಸಾಲಿನಲ್ಲಿ ಒಟ್ಟು ಅನುದಾನ ರೂ.45.85 ಲಕ್ಷಗಳು ಬಂದಿದ್ದು, ಇದರ ಅರ್ಧಕ್ಕಿಂತ ಹೆಚ್ಚಿನ ಅನುದಾನ ಕೇವಲ ಸಾಮಗ್ರಿ ಖರೀದಿಗಾಗಿ ಕಾಯ್ದಿರಿಸಿ ಹಿಂದಿರುವ ಉದ್ದೇಶವೇನೆಂದರೆ ಬೋಗಸ್ ಹಣ ದುರುದ್ದೇಶದಿಂದ ಪಡೆದಿರುತ್ತಾರೆ. ಅದೇರೀತಿ 2014-15ನೇ ಸಾಲಿನಲ್ಲಿ ನೋಂದಾಯಿಸಿದ ಫಲಾನುಭವಿಗಳನ್ನು ಖುದ್ದಾಗಿ ಕರೆಯಿಸಿ ವಿಚಾರಿಸಲಾಗಿ, ರೂ.200/- ಕೊಟ್ಟಿರುವ ದೇಣಿಗೆ ಅಧಿಕೃತವಲ್ಲದ ಮತ್ತು ವ್ಯವಹಾರಗಳಿಂದ ಸ್ವಯಂಸೃಷ್ಟಿಸಿದ ದಾಖಲಾತಿಗಳಾಗಿರುತ್ತವೆ. ಅದೇರೀತಿ ಫಲಾನುಭವಿಗಳಿಗೆ ಅವರ ಹೆಸರಿಗೆ ಕಾನೂನು ಬಾಹಿರವಾಗಿ ಹೊಲದಲ್ಲಿ ಮನೆಯನ್ನು ನಿರ್ಮಿಸಿ ಅವರ ಹೆಸರಿಗೆ ಈಗಾಗಲೇ ವಾಸದ ಮನೆಯಿದ್ದರೂ ಸಹ ವ್ಯವಹಾರ ಬಯಲಿಗೆ ಬಂದಿರುತ್ತದೆ. ಬೇರೆಯವರ ಹೆಸರಿನಲ್ಲಿ ಈಗಾಗಲೇ ಮನೆ ಹೊಂದಿರುವವರನ್ನು ಅಕ್ರಮವಾಗಿ ಜೆ.ಪಿ.ಆರ್.ಎಸ್. ಅಡಿಯಲ್ಲಿ ಫಲಾನುಭವಿಯೆಂದು ಹಣ ಬಿಡುಗಡೆ ಮಾಡಿಕೊಂಡು ಅಕ್ರಮ ಅವ್ಯವಹಾರ ನಡೆಸಿರುವುದು ದಿ.18/11/2014 ರ ಕೊನೆಯಲ್ಲಿ ಬರೆದಿರುವಂತಹ ಚೆಕ್ ಸಂ.5051 ರಿಂದ 5059 ವರೆಗಿನ 9 ಚೆಕ್‌ಗಳನ್ನು ಮುಂಗಡವಾಗಿ ಕೊಟ್ಟಿದ್ದು, ಸದರಿ ಚೆಕ್‌ಗಳು ಖಾಲಿ ಚೆಕ್‌ಗಳಾಗಿರುತ್ತವೆ. ತದನಂತರ, ಪಿ.ಡಿ.ಓ. ರವರು ತಮ್ಮ ಹಸ್ತಾಕ್ಷರದಿಂದ ಭರ್ತಿ ಮಾಡಿ ಹಣ ದುರುಪಯೋಗ ಪಡಿಸಿಕೊಂಡಿರುತ್ತಾರೆ. ಶ್ರೀ.ಪ್ರಸನ್ನಕುಮಾರ್, ಅಧ್ಯಕ್ಷರು ಮತ್ತು ಪಿ.ಡಿ.ಓ ರವರು ಪ್ರಸ್ತುತ ಪ್ರಕರಣಕ್ಕೆ ಸಂಬಂಧಪಟ್ಟಂತೆ ಅಕ್ರಮ ಎಸಗಿರುತ್ತಾರೆ. ಅದೇರೀತಿ ಈ ಮೊದಲು ದಾಖಲಾಗಿರುವಂತಹ ಕಂಪ್ಲೆಂಟ್/ಉಪಲೋಕ್/ಜಿಎಲ್‌ಬಿ/3890/2014 ಇದೇ ಆರೋಪಗಳನ್ನು ಹೊರಿಸಿ ನೀಡಲಾದ ದೂರಿಗೆ ಸಂಬಂಧಿಸಿದಂತೆ ಸದರಿಯವರು ಯಾವುದೇ ಆರೋಪಗಳನ್ನು ಮಾಡಿರುವುದಿಲ್ಲ. ಆ ಪ್ರಕರಣವು ಯಾವುದೇ ರೀತಿಯ ಸಂಬಂಧವಿಲ್ಲ. ಈಗಾಗಲೇ ಈ ಮೇಲೆ ಹೇಳಿದ ಪ್ರಕರಣದಲ್ಲಿ ಸದರಿ 5ನೇ ಎದುರುದಾರರನ್ನು ಕೈಬಿಡಲಾಗಿದೆ. ಆದುದರಿಂದ, ಪ್ರಸ್ತುತ ದೂರಿನಲ್ಲಿ ಸದರಿಯವರನ್ನು ಬಿಡುಗಡೆ ಮಾಡಬೇಕೆಂದು ಕೋರಿರುತ್ತಾರೆ. ಆದರೆ ಸದರಿಯವರ ಆಕ್ಷೇಪಣೆಯನ್ನು ಈ ಹಂತದಲ್ಲಿ ಒಪ್ಪಲು ಬರುವುದಿಲ್ಲವೆಂದು ಅಭಿಪ್ರಾಯಪಡಲಾಗಿದೆ.

21. ತನಿಖಾಧಿಕಾರಿಗಳ ವರದಿ ಮತ್ತು ದಾಖಲೆಗಳನ್ನು ಗಮನಿಸಿದಾಗ, 1 ರಿಂದ 6ನೇ ಎದುರುದಾರರು ಅಧಿಕಾರ ದುರುಪಯೋಗ ಮತ್ತು ಕರ್ತವ್ಯಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಆದ್ದರಿಂದ, 1 ರಿಂದ 5ನೇ ಎದುರುದಾರರು ಸರ್ಕಾರಿ ನೌಕರರಾಗಿದ್ದು, ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆ. 6ನೇ ಎದುರುದಾರರು ಗ್ರಾಮ ಪಂಚಾಯಿತಿಯ ಅಧ್ಯಕ್ಷರಾಗಿರುತ್ತಾರೆ.

22. ಪ್ರಸ್ತುತ ವರದಿಯ ಕಂಡಿಕೆ 5 ರಂತೆ ಪೊಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬಳ್ಳಾರಿ, ಇವರು ಸಲ್ಲಿಸಿರುವ ವರದಿಯಲ್ಲಿ 1 ರಿಂದ 6ನೇ ಎದುರುದಾರರು ಸರ್ಕಾರದ ಹಣವನ್ನು ದುರ್ಬಳಕೆ ಮಾಡಿಕೊಂಡಿರುವ ಬಗ್ಗೆ ವಿವರಗಳನ್ನು ನೀಡಿದ್ದು, ಸದರಿ ದುರ್ಬಳಕೆ ಮಾಡಿಕೊಂಡಿರುವ ಹಣವನ್ನು 1 ರಿಂದ 6ನೇ ಎದುರುದಾರರಿಂದ ವಸೂಲಾತಿ ಮಾಡುವುದು ಅಗತ್ಯವಾಗಿರುತ್ತದೆ.

23. 1 ರಿಂದ 5ನೇ ಎದುರುದಾರರು ಸಾರ್ವಜನಿಕ/ಸರ್ಕಾರಿ ನೌಕರರಾಗಿದ್ದು, ತಮ್ಮ ಕರ್ತವ್ಯ ಪರಿಪಾಲನೆಯಲ್ಲಿ ನಿಷ್ಠೆಯನ್ನು ತೋರದೆ, ಕರ್ತವ್ಯಲೋಪವೆಸಗಿ, ದುರ್ವರ್ತನೆ ತೋರಿಸಿ, ನಿಯಮಗಳನ್ನು ಉಲ್ಲಂಘಿಸಿ ಸಾರ್ವಜನಿಕ/ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡಿರುವುದು ಮೇಲ್ನೋಟಕ್ಕೆ ಕಂಡುಬರುತ್ತಿರುವುದರಿಂದ, ಕರ್ನಾಟಕ ನಾಗರೀಕ ಸೇವೆ (ನಡತೆ) ನಿಯಮ 1966 ರ ನಿಯಮ 3(1) ರನ್ವಯ ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುತ್ತಾರೆಂದು ಕಂಡುಬಂದಿದ್ದರಿಂದ, ಅವರ ವಿರುದ್ಧ ಶಿಸ್ತು ನಡವಳಿಕೆ ಹೂಡಲು ಮತ್ತು ಹಾಗೆಯೇ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳು, 1957 ರ ನಿಯಮ 14-ಎ ರ ಅಡಿಯಲ್ಲಿ, 1 ರಿಂದ 5ನೇ ಎದುರುದಾರರಾದ (1) ಶ್ರೀ.ಬಿ.ದಿಲೀಪ್ ಸಾಬ್ (ದಿಲೀಪ್‌ಕುಮಾರ್), ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಹಿರೇಕುಂಬಳಗುಂಟೆ ಗ್ರಾಮ ಪಂಚಾಯಿತಿ, (2) ಶ್ರೀ.ಹೆಚ್.ಬೋರಯ್ಯ, ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಹಿರೇಕುಂಬಳಗುಂಟೆ ಗ್ರಾಮ ಪಂಚಾಯಿತಿ, (3) ಶ್ರೀ.ಹೆಚ್.ಸಿ.ನಾರಾಯಣಪ್ಪ, ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿ, ಹಿರೇಕುಂಬಳಗುಂಟೆ ಗ್ರಾಮ ಪಂಚಾಯಿತಿ (4) ಶ್ರೀ.ಬಿ.ಅಶೋಕ್, ಹಿಂದಿನ ಕಿರಿಯ ಇಂಜಿನಿಯರ್, ಹಿರೇಕುಂಬಳಗುಂಟೆ ಗ್ರಾಮ ಪಂಚಾಯಿತಿ, ಕೂಡ್ಲಿಗಿ ತಾಲ್ಲೂಕು, (5) ಶ್ರೀ.ಎಂ.ಬಸವನಗೌಡ, ಹಿಂದಿನ ಕಿರಿಯ ಇಂಜಿನಿಯರ್ (ನಿವೃತ್ತ), ಹಿರೇಕುಂಬಳಗುಂಟೆ ಗ್ರಾಮ ಪಂಚಾಯಿತಿ, ಕೂಡ್ಲಿಗಿ ತಾಲ್ಲೂಕು, ರವರ ವಿರುದ್ಧ ವಿಚಾರಣೆ ನಡೆಸಲು ಹಾಗೂ **5ನೇ ಎದುರುದಾರರಾದ ಶ್ರೀ.ಎಂ.ಬಸವನಗೌಡ ಇವರು ದಿ.30/6/2019 ರಂದು ನಿವೃತ್ತಿಯಾಗಿರುವುದರಿಂದ ಸದರಿಯವರ ವಿರುದ್ಧ ಕರ್ನಾಟಕ ಸೇವಾ ನಿಯಮಾವಳಿಗಳ ನಿಯಮ 214(2)(ಬಿ)(i) ರಂತೆ ಸರ್ಕಾರದ ಅನುಮತಿಯೊಂದಿಗೆ** ಈ ಪ್ರಾಧಿಕಾರಕ್ಕೆ ಒಪ್ಪಿಸುವಂತೆ, ಹಾಗೂ ದುರ್ಬಳಕೆ ಮಾಡಿಕೊಂಡಿರುವ ಹಣವನ್ನು 1 ರಿಂದ 6ನೇ ಎದುರುದಾರರಿಂದ ದುರ್ಬಳಕೆಯಾದ ಹಣವನ್ನು ವಸೂಲಿ ಮಾಡಲು ಹಾಗೂ ಸದರಿಯವರ ವಿರುದ್ಧ ಭಾರತೀಯ ದಂಡ ಸಂಹಿತೆಯ ಕಲಂ 409 ರಂತೆ ಹಾಗೂ ಪಿ.ಸಿ.ಆಕ್ಟ್ ಕಲಂ 13(1)(ಎ) ರನ್ವಯ ಕ್ರಿಮಿನಲ್ ಪ್ರಕರಣವನ್ನು ಹೂಡಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸಕ್ಷಮ ಪ್ರಾಧಿಕಾರಕ್ಕೆ ನಿರ್ದೇಶನ ನೀಡಲು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ, ಶಿಸ್ತು ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಿದೆ.

24. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(4) ರ ಪ್ರಕಾರ, ಶಿಸ್ತು ಪ್ರಾಧಿಕಾರವು ವರದಿಯಂತೆ ಕ್ರಮ ಕೈಗೊಂಡು ಅಥವಾ ಕೈಗೊಳ್ಳಬಹುದಾದ ಕ್ರಮವನ್ನು ಈ ವರದಿ ತಲುಪಿದ ದಿನಾಂಕದಿಂದ **ಮೂರು ತಿಂಗಳೊಳಗಾಗಿ** ಈ ಪ್ರಾಧಿಕಾರಕ್ಕೆ ತಿಳಿಸಲೂ ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

K.N. Phaneendra 06/05/2022

**(ನ್ಯಾಯಮೂರ್ತಿ ಕೆ.ಎನ್.ಫಣೀಂದ್ರ)**
**ಉಪಲೋಕಾಯುಕ್ತರು-2,**
**ಕರ್ನಾಟಕ ರಾಜ್ಯ, ಬೆಂಗಳೂರು.**